## 2015 ಕ.ತೀ.ವ. 292

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್

### ಶ್ರೀ ಎಂ. ಪುರುಷೋಥಮ್ ಮತ್ತು ಇತರರು –ವಿರುದ್ಧ– ಶ್ರೀಮತಿ ಭೂದೇವಮ್ಮ ಮತ್ತು ಇತರರು *

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ರಿಟ್ ಅರ್ಜಿದಾರರು ಅಧಿವಿಚಾರಣಾ ನ್ಯಾಯಾಲಯದ ಎದುರುದಾರರ ವಿರುದ್ಧ ದಾವೆಯೊಂದನ್ನು ಸಲ್ಲಿಸಿದ್ದು ಅವರು ಹಾಜರುಪಡಿಸಿದ್ದ ಕ್ರಯಕರಾರು ಪತ್ರಕ್ಕೆ ಸೂಕ್ತ ಮುದ್ರಾಂಕ ಶುಲ್ಕವನ್ನು ನೀಡಿಲ್ಲವೆಂದು, ಆ ಕಾರಣಕ್ಕಾಗಿ ಸೂಕ್ತ ಮುದ್ರಾಂಕ ಶುಲ್ಕವನ್ನು ನೀಡುವಂತೆ ಆದೇಶಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಕ್ರಯ ಕರಾರಿನ ಒಕ್ಕಣೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಅರ್ಜಿದಾರರು ಸ್ವತ್ತಿನ ಅನುಭೋಗವನ್ನು ಎದುರುದಾರರಿಗೆ ನೀಡಿರುತ್ತಾರೆ. ಈ ಕಾರಣದಿಂದ ಕರ್ನಾಟಕ ಮುದ್ರಾಂಕ ಕಾಯಿದೆ ಕಲಂ 5(i)(ಇ) ಅನ್ವಯಿಸುತ್ತದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

ಅರ್ಜಿದಾರರ ಪರ : ಮೆ: ನಾಗೇಶ್ ಅಸೋಸಿಯೇಟ್ಸ್ ಪರವಾಗಿ
ಶ್ರೀ ಸಿ.ವಿ. ಶ್ರೀನಿವಾಸ – ವಕೀಲರು
1, 10 ಮತ್ತು 15ನೇ ಪ್ರತ್ಯರ್ಜಿದಾರರ ಪರ : ಶ್ರೀ ಎಂ. ರಾಮಯ್ಯ ಗೌಡ – ವಕೀಲರು

* ರಿಟ್ ಅರ್ಜಿ ಸಂ. 4882/2011 (ಜಿಎಂ–ಸಿಪಿಸಿ), ದಿನಾಂಕ 14ನೇ ಮಾರ್ಚ್, 2014.

2ನೇ ಪ್ರತ್ಯರ್ಜಿದಾರರ ಪರ : ಶ್ರೀ ಎಂ.ವಿ. ಚಂದ್ರಶೇಖರ್ ರೆಡ್ಡಿ ಪರವಾಗಿ
ಶ್ರೀ ಎಸ್. ನರೇಂದ್ರ – ವಕೀಲರು
5, 7, 8 ಮತ್ತು 9ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ
3, 4 6 ನೋಟೀಸು ನೀಡಲಾಗಿದೆ ಮತ್ತು 11 ರಿಂದ 14 held sufficient

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್ :**

ದಾವೆಯಲ್ಲಿನ ವಾದಿಯು, ಮಾರಾಟದ ಒಪ್ಪಂದದಲ್ಲಿ ಯುಕ್ತವಾಗಿ ಮುದ್ರಾಂಕ ಶುಲ್ಕವನ್ನು ಪಾವತಿಸಿರುವುದಿಲ್ಲವೆಂದು ಮತ್ತು ಕೊರತೆಯಿರುವ ಮುದ್ರಾಂಕ ಶುಲ್ಕವನ್ನು ಮತ್ತು ಸದರಿ ಶುಲ್ಕದ ಹತ್ತರಷ್ಟು ದಂಡವನ್ನು ವಾದಿಗಳು ಸಂದಾಯ ಮಾಡಬೇಕೆಂದು ಅಭಿಪ್ರಾಯಪಟ್ಟು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾನೆ.

2. ವಾದಿಗಳು, ಮಾರಾಟದ ಒಪ್ಪಂದದ ನಿರ್ದಿಷ್ಟ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತ್ಯರ್ಜಿದಾರರು ಲಿಖಿತ ಹೇಳಿಕೆಯನ್ನು ಸಲ್ಲಿಸುವ ಮೂಲಕ ವಿಷಯವನ್ನು ಪ್ರಶ್ನಿಸಿರುತ್ತಾರೆ. ಮತ್ತು ವಿವಾದಾಂಶಗಳನ್ನು ರೂಪಿಸಿರುತ್ತಾರೆ. ವಾದಿಗಳನ್ನು ಸಾಕ್ಷ್ಯದ ಸಮಯದಲ್ಲಿ ನಿಶಾನೆ ಪಿ.1 ರಿಂದ ಪಿ.45ರವರೆಗೆ ಗುರುತು ಮಾಡಿರುತ್ತಾರೆ. ಮತ್ತು ನ್ಯಾಯಾಲಯದ ಎದುರು ಸಾಕ್ಷ್ಯ ನೀಡುವ ಸಮಯದಲ್ಲಿ ಪ್ರಶ್ನಿತ ಒಪ್ಪಂದವನ್ನು ಸಲ್ಲಿಸಲು ಕೋರಿರುತ್ತಾರೆ. ಆ ಸಮಯದಲ್ಲಿ, ಪ್ರತಿವಾದಿಗಳು, ಸಾಕಷ್ಟು ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಿರುವುದಿಲ್ಲವೆಂಬ ಆಧಾರದ ಮೇಲೆ ಸದರಿ ದಸ್ತಾವೇಜನ್ನು ಗುರುತು ಮಾಡಲು ಆಕ್ಷೇಪಿಸಿರುತ್ತಾರೆ.

3. ಎಂಟು ಸುನಾವಣೆ ದಿನಾಂಕಗಳ ತರುವಾಯ, ವಾದಿಗಳು, ಲಿಖಿತ ಪತ್ರದ ಮೇಲೆ ಸಂದಾಯ ಮಾಡಬಹುದಾದ ಮುದ್ರಾಂಕ ಶುಲ್ಕದ ನಿರ್ಧರಣೆಗೆ

ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಮತ್ತು ಜಿಲ್ಲಾ ರಿಜಿಸ್ಟ್ರಾರರಿಗೆ ವಿಷಯವನ್ನು ಉಲ್ಲೇಖಿಸಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು, ಉಭಯ ಪಕ್ಷಕಾರರನ್ನು ಸುನಾವಣೆ ಮಾಡಿದ ತರುವಾಯ, ಒಪ್ಪಂದವನ್ನು ಸಾಕಷ್ಟು ಮುದ್ರಾಂಕ ಶುಲ್ಕ ನೀಡದೆ ಮಾಡಿಕೊಳ್ಳಲಾಗಿರುತ್ತದೆಂದೂ, ಆದ್ದರಿಂದ ವಾದಿಗಳು ಶುಲ್ಕ ಮತ್ತು ದಂಡವನ್ನು ಸಂದಾಯ ಮಾಡಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ಸದರಿ ಆದೇಶದಿಂದ ಬಾಧಿತರಾದ ವಾದಿಗಳು ಈ ನ್ಯಾಯಾಲಯಕ್ಕೆ ನೆರವು ಕೋರಿ ಬಂದಿರುತ್ತಾರೆ.

4. ವಾದಿಗಳ ಪರ ಮಾನ್ಯ ನ್ಯಾಯವಾದಿಗಳು, ಪ್ರಶ್ನಿತ ಆದೇಶದ ಸರಿತನವನ್ನು ಟೀಕಿಸಿ, ಪ್ರಶ್ನಿತ ಒಪ್ಪಂದದಡಿಯಲ್ಲಿ ಅಧಿಭೋಗದ ವರ್ಗಾವಣೆಯು ಸಾಂಕೇತಿಕ ಸ್ವರೂಪದ್ದಾಗಿದೆ. ಆದ್ದರಿಂದ, ಕರ್ನಾಟಕ ಸ್ಟ್ಯಾಂಪು ಅಧಿನಿಯಮದ ಅನುಚ್ಛೇದ 5(i)(ಇ)ನ್ನು ಅನ್ವಯಿಸಲಾಗುವುದಿಲ್ಲ. ಇದಕ್ಕೆ ಬೆಂಬಲವಾಗಿ, ಒಪ್ಪಂದದ (5) ಮತ್ತು (6)ನೇ ಖಂಡಗಳನ್ನು ಉದಾಹರಿಸಿದ್ದು, ಅದು ಈ ಮುಂದಿನಂತಿರುತ್ತದೆ :

> "5. ಇಲ್ಲಿ ಬೇರೆಯವರಿಗಲ್ಲದೆ ಖರೀದಿದಾರರಿಗೆ ಅಧಿಭೋಗದೊಂದಿಗೆ ಅನುಸೂಚಿತ 'ಎ' ಮತ್ತು 'ಬಿ' ಸ್ವತ್ತನ್ನು ಮಾರಾಟ ಮಾಡತಕ್ಕದ್ದೆಂದು ಖರೀದಿದಾರರೊಂದಿಗೆ ಪ್ರಸ್ತುತ ಮಾರಾಟಗಾರರು ಕ್ರಮಕೈಗೊಂಡು ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಮುಂದುವರೆದು, ಕ್ರಯಪತ್ರದ ನೋಂದಣಿಯುಂದು ಅಥವಾ ಅದಕ್ಕೆ ಮೊದಲು, ಮಾರಾಟಗಾರರು ಅನುಸೂಚಿತ ಎ ಮತ್ತು ಬಿ ಸ್ವತ್ತಿನಿಂದ ಬಾಡಿಗೆದಾರರನ್ನು ಖಾಲಿ ಮಾಡಿಸಲು ಕ್ರಮಕೈಗೊಂಡು, ಖರೀದಿದಾರರಿಗೆ ಅನುಸೂಚಿತ ಎ ಮತ್ತು ಬಿ ಸ್ವತ್ತಿನ ಅಧಿಭೋಗವನ್ನು ಹಸ್ತಾಂತರಿಸಿರುತ್ತಾರೆ.

> 6. ಹಾಲಿ ಖರೀದಿದಾರರು, ಅನುಸೂಚಿತ ಎ ಮತ್ತು ಬಿ ಸ್ವತ್ತಿನ ಮೇಲಿನ ಅವರ ಎಲ್ಲಾ ಹಕ್ಕುಗಳು, ಸ್ವಾಮ್ಯ ಮತ್ತು ಹಿತಾಸಕ್ತಿಯನ್ನು ನಿರುಪಾಧಿಕ ಕ್ರಯದ ರೂಪದಲ್ಲಿ ನೀಡಲು, ಮಾರಾಟ ಮಾಡಲು, ವರ್ಗಾವಣೆ ಮಾಡಲು, ಬಿಟ್ಟುಕೊಡಲು, ವಹಿಸಿಕೊಡಲು ಕ್ರಮಕೈಗೊಂಡಿರುತ್ತಾರೆ. **ಮಾರಾಟಗಾರರು ಇಂದು, ಖರೀದಿದಾರರಿಗೆ ಅನುಸೂಚಿತ ಎ ಮತ್ತು ಬಿ ಸ್ವತ್ತುಗಳನ್ನು ಅಧಿಭೋಗದೊಂದಿಗೆ ಬಿಟ್ಟುಕೊಟ್ಟಿರುತ್ತಾರೆ**."
>
> (ನನ್ನಿಂದ ಒತ್ತು ನೀಡಲಾಗಿದೆ)

5. ಮೇಲಿನ ಖಂಡಗಳ ಸಂಯೋಜಿತ ಓದಿನಿಂದ, ಬಾಡಿಗೆದಾರರು ಅನುಸೂಚಿತ ಎ ಮತ್ತು ಬಿ ಸ್ವತ್ತುಗಳ ಅಧಿಭೋಗದಲ್ಲಿರುತ್ತಾರೆಂಬುದು ಸ್ಪಷ್ಟವಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸ್ವತ್ತನ್ನು ಮಾರಾಟ ಮಾಡಲು ಒಪ್ಪಿಕೊಂಡಂಥ ಮಾಲೀಕರು ಭೌತಿಕವಾಗಿ ಅಧಿಭೋಗದಲ್ಲಿರುವುದಿಲ್ಲ ಮತ್ತು ಬಾಡಿಗೆದಾರರ ಮೂಲಕ ಅಧಿಭೋಗದಲ್ಲಿರುತ್ತಾನೆ. 6ನೇ ಖಂಡವು ಮಾರಾಟಗಾರರು, ಇಂದು ಖರೀದಿದಾರರಿಗೆ ಅನುಸೂಚಿತ ಎ ಮತ್ತು ಬಿ ಸ್ವತ್ತುಗಳನ್ನು, ಅಧಿಭೋಗದೊಂದಿಗೆ ಬಿಟ್ಟುಕೊಟ್ಟಿರುತ್ತಾರೆಂದು ಅಭಿಪ್ರಾಯಪಟ್ಟಿರುತ್ತದೆ.

6. ವಾದಪತ್ರದ 5ನೇ ಪ್ಯಾರಾವು ಈ ಮುಂದಿನಂತಿರುತ್ತದೆ :

> "5. 12.10.2004ನೇ (ಹನ್ನೆರಡು–ಹತ್ತು–ಎರಡು ಸಾವಿರದ ನಾಲ್ಕು) ದಿನಾಂಕದ ಮಾರಾಟದ ಒಪ್ಪಂದದ ನಿರ್ವಹಣೆಯ ಭಾಗವಾಗಿ, ಪ್ರತಿವಾದಿಗಳು, ದಾವಾ ಅನುಸೂಚಿತ ಸ್ವತ್ತಿನ ಅಧಿಭೋಗದಲ್ಲಿ ವಾದಿಗಳನ್ನು ಇಟ್ಟಿರುತ್ತಾರೆ. ವಾದಪತ್ರದ ಅನುಸೂಚಿಯಲ್ಲಿ ಬಾಬು–II ಎಂದು ವಿವರಿಸಿದ ಸ್ವತ್ತಿನ ವಾಸ್ತವಿಕ

ಅಧಿಭೋಗದಲ್ಲಿ ವಾದಿಗಳನ್ನು ಇಡಬೇಕಾಗಿರುತ್ತವೆ. ವಾದಪತ್ರದ ಅನುಸೂಚಿಯಲ್ಲಿ ಬಾಬು–I ಎಂದು ವಿವರಿಸಿರುವ ಸ್ವತ್ತು ಮೂವರು ಬೇರೆಬೇರೆ ವ್ಯಕ್ತಿಗಳ ಅಧಿಭೋಗದಲ್ಲಿರುವುದರಿಂದ, ವಾದಿಗಳನ್ನು ಸದರಿ ಸ್ವತ್ತಿನ ಸಾಂಕೇತಿಕ ಅಧಿಭೋಗದಲ್ಲಿಟ್ಟಿರುತ್ತಾರೆ."

7. ಒಪ್ಪಂದದ 9ನೇ ಖಂಡವು ಈ ಮುಂದಿನಂತಿರುತ್ತದೆ :

"9. ಮಾರಾಟಗಾರರು, ಇಂದು ಖರೀದಿದಾರರನ್ನು ಅನುಸೂಚಿತ ಎ ಮತ್ತು ಬಿ ಸ್ವತ್ತಿನ ವಾಸ್ತವಿಕ ಅಧಿಭೋಗದಲ್ಲಿಟ್ಟಿರುತ್ತಾರೆ."

8. ಆದ್ದರಿಂದ, ಬಾಬು ಸಂಖ್ಯೆ–IIಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ವಾದಿಯನ್ನು ಮಾರಾಟದ ಒಪ್ಪಂದದ ಭಾಗಶಃ ಕಾರ್ಯನಿರ್ವಹಣೆಯಲ್ಲಿ ಸ್ವತ್ತಿನ ವಾಸ್ತವಿಕ ಶಾಂತಿಯುತ ಅಧಿಭೋಗದಲ್ಲಿಡಲಾಗಿದೆಯೆಂಬುದು ಸ್ಪಷ್ಟವಾಗಿರುತ್ತದೆ. ವಾದಪತ್ರ ಅನುಸೂಚಿಯ ಬಾಬು ಸಂಖ್ಯೆ–Iಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಅವರನ್ನು ಸಾಂಕೇತಿಕ ಅಧಿಭೋಗದಲ್ಲಿಡಲಾಗಿರುತ್ತದೆ. ಬಾಬು ಸಂಖ್ಯೆ–Iಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಬಾಡಿಗೆದಾರನು ತಕ್ಷಣದ ಅಧಿಭೋಗದಲ್ಲಿರುತ್ತಾನೆ. ಮಾಲೀಕನು ಮಧ್ಯದ ಸ್ಥಾನದಲ್ಲಿದ್ದು, ಸಾಂಕೇತಿಕ ಅಧಿಭೋಗವನ್ನು ಖರೀದಿದಾರ–ವಾದಿಗೆ ಹಸ್ತಾಂತರಿಸಿರುತ್ತಾನೆ. ಕಾನೂನಿನ ಎಲ್ಲಾ ಆಯಾಮಗಳು, ಮಾರಾಟದ ಒಪ್ಪಂದ ಭಾಗಶಃ ಕಾರ್ಯನಿರ್ವಹಣೆಯಲ್ಲಿ ಅಧಿಭೋಗದ ವರ್ಗಾವಣೆಯನ್ನು ಅಗತ್ಯಪಡಿಸುತ್ತವೆ. ಈ ಒಕ್ಕಣೆಯು ಒಪ್ಪಂದದಲ್ಲಿದ್ದಲ್ಲಿ, ನಂತರ ಅಂಥ ಲಿಖಿತ ಪತ್ರಕ್ಕೆ ಹಸ್ತಾಂತರಣ ಪತ್ರದಂತೆ ಮುದ್ರಾಂಕ ಶುಲ್ಕ ಕಟ್ಟಬೇಕಾಗುತ್ತದೆ.

9. ಆದ್ದರಿಂದ, ದಸ್ತಾವೇಜನ್ನು ಗುರುತು ಮಾಡುವ ಸಮಯದಲ್ಲಿ, ವರ್ಗಾಯಿಸಲಾಗಿದೆ. ಅಧಿಭೋಗವನ್ನು ಸಾಂಕೇತಿಕವಾಗಿದೆಯೋ ಅಥವಾ

ವಾಸ್ತವಿಕವಾಗಿದೆಯೆ ಎಂಬುದನ್ನು ಪತ್ತೆಹಚ್ಚಲು ನ್ಯಾಯಾಲಯ ವಿಚಾರಣೆಯನ್ನು ನಡೆಸಬೇಕೆಂಬ ವಿಚಾರವೇ ಉದ್ಭವಿಸುವುದಿಲ್ಲ ಮತ್ತು ಇದು ಪತ್ರಗಳ ನಿಬಂಧನೆಗಳಿಂದ ನಡೆಯಬೇಕಾಗಿರುವಂಥದ್ದಾಗಿರುತ್ತದೆ. ಹಾಗೆ ತೀರ್ಮಾನಿಸಿದಲ್ಲಿ, ಅಧಿಭೋಗವನ್ನು ಪ್ರಶ್ನಿತ ಮಾರಾಟದ ಒಪ್ಪಂದದ ಭಾಗಶಃ ಕಾರ್ಯನಿರ್ವಹಣೆಯಾಗಿ ನೀಡಲಾಗಿರುತ್ತದೆ. ಆದ್ದರಿಂದ ಕರ್ನಾಟಕ ಸ್ಟಾಂಪು ಅಧಿನಿಯಮದ ಅನುಚ್ಛೇದ 5(i)(ಇ) ಯನ್ನು ಅನ್ವಯಿಸಲಾಗಿದೆ. ಲಿಖಿತ ಪತ್ರಕ್ಕೆ ಯುಕ್ತವಾಗಿ ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಿರುವುದಿಲ್ಲ ಮತ್ತು ಕಾನೂನಿನಲ್ಲಿ ಸೂಚಿಸಿರುವಂತೆ ಶೇ.10ರಷ್ಟು ದಂಡದೊಂದಿಗೆ ಕೊರತೆಯಿರುವ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಲು ವಾದಿಗಳಿಗೆ ನಿರ್ದೇಶಿಸಲಾಗಿದೆಯೆಂಬ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿಯಲಾಗಿರುತ್ತದೆ. ಹಸ್ತಕ್ಷೇಪಕ್ಕೆ ಸಂಬಂಧಿಸಿದಂತೆ ಯಾವುದೇ ವಾದವನ್ನು ಮಾಡಲಾಗಿರುವುದಿಲ್ಲ. ಆದ್ದರಿಂದ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

---